ವಿಜಾಪುರ ತಾಲ್ಲೂಕಿನ ಭೂದಾಖಲೆಗಳ ಇಲಾಖೆಯನ್ನು ಗಣಕೀಕರಣಗೊಳಿಸುವುದು.

403 -ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ತಾಲ್ಲೂಕಿನ ಭೂ ದಾಖಲೆಗಳ ಇಲಾಖೆಯನ್ನು ಸಂಪೂರ್ಣವಾಗಿ ಕಂಪ್ಯೂಟರಿಕರಣಗೊಳಿಸಲಾಗಿದೆಯೇ?

ಆ) ಇಲ್ಲದೆ ಇದ್ದಲ್ಲಿ ಯಾವಾಗ ಕಂಪ್ಯೂಟರಿಕರಣಗೊಳಿಸಲಾಗುವುದು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಇಲ್ಲ.

ಆ) ರಾಜ್ಯದಲ್ಲಿನ ಭೂದಾಖಲೆಗಳ ಗಣಕೀಕರಣ ಪ್ರಸ್ತಾವನೆಯನ್ನು ಭಾರತ ಸರಕಾರಕ್ಕೆ ಕಳುಹಿಸಲಾಗಿದ್ದು ಮಂಜೂರಾತಿಯನ್ನು ನಿರೀಕ್ಷಿಸಲಾಗುತ್ತಿದೆ.

ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ಯತ್ನಾಳ್) : ಮಾನ್ಯ ಅಧ್ಯಕ್ಷರೆ, ನಾನು ಬಹಳ ಪ್ರಮುಖವಾದಂತಹ ಪ್ರಶ್ನೆಯನ್ನು ಅವರಿಗೆ ಕೇಳಿದ್ದೇನೆ. ಕಂಪ್ಯೂಟರಿಕರಣ ಭೂ ದಾಖಲೆಗಳ ಬಗ್ಗೆ ಎಷ್ಟು ದಿವಸದಲ್ಲಿ ಮಂಜೂರಾತಿ ಬರುತ್ತದೆ ಎನ್ನುವುದನ್ನು ಸನ್ಮಾನ್ಯ ಸಚಿವರು ತಿಳಿಸಬೇಕು. ಏಕೆ ವಿಳಂಬ ಆಗುತ್ತಿದೆ ಎನ್ನುವುದನ್ನೂ ಸಹ ತಿಳಿಸಬೇಕು. ಅದನ್ನು ಅತ್ಯಂತ ತೀಕ್ಷ್ಣ ಅವಸ್ಥೆಯಲ್ಲಿರುವಂತಹ ಭೂ ದಾಖಲೆಗಳ ಬಗ್ಗೆ ಆದ್ಯತೆ ಕೊಡುತ್ತೀರಾ ಎನ್ನುವ ಪ್ರಶ್ನೆಗೆ ಉತ್ತರವನ್ನು ಕೊಡಬೇಕು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನಿಮಗೆಲ್ಲಾ ಗೊತ್ತಿರುವ ಹಾಗೆ ಈ ಭೂ ದಾಖಲೆಗಳ ಟಿಪ್ಪಣಿ ಕಾಪಿ ಇರಬಹುದು ಅಥವಾ ದಾಖಾರು ಬಂದುಗಳು ಇರಬಹುದು. ಇವೆಲ್ಲಾ ನೂರಾರು ವರ್ಷಗಳಷ್ಟು ಹಳೆಯದಾಗಿದೆ. ಅದನ್ನು ತೆರೆದು ನೋಡತಕ್ಕ ಪರಿಸ್ಥಿತಿಯಲ್ಲೂ ಇಲ್ಲ. ಹೀಗಾಗಿ ಆ ದಾಖಲೆಗಳನ್ನು ಗಣಕೀಕರಣ ಮಾಡತಕ್ಕ ಒಂದು ಕಾರ್ಯಕ್ರಮ ಕೇಂದ್ರ ಸರ್ಕಾರದ ಯೋಜನೆ ಅಡಿಯಲ್ಲಿದೆ. ಆ ಯೋಜನೆ ಅಡಿಯಲ್ಲಿ ನಮ್ಮ ರಾಜ್ಯ ಸರ್ಕಾರದಿಂದ ಗಣಕೀಕರಣ ಮಾಡಬೇಕೆಂದು ಹೇಳಿ ಈಗಾಗಲೇ 12 ಕೋಟಿ ರೂಪಾಯಿಗಳ ಅಂದಾಜನ್ನು ಕಳುಹಿಸಿಕೊಟ್ಟಿದ್ದೇವೆ. ಈಗಾಗಲೇ ಅದರ ಬಗ್ಗೆ ಕೇಂದ್ರ ಸರ್ಕಾರ ತೀವ್ರ ಪರಿಶೀಲನೆ ಮಾಡುತ್ತಿದೆ. ಮತ್ತೆ ಅವರು ನಮ್ಮ ಸರ್ಕಾರಕ್ಕೆ ಪತ್ರ ಬರೆದು ಇದನ್ನು ಪ್ರಾಯೋಗಿಕವಾಗಿ ಮಾಡಲು ಸಾಧ್ಯ ಇದೆಯೇ ಎಂಬುದನ್ನು ಮಾಡಿ, ಅದರ ತಾಂತ್ರಿಕ ಯಶಸ್ಸನ್ನು ತಿಳಿಸಬೇಕು ಎಂದು ಹೇಳಿದರು. ಅದನ್ನೂ ಸಹ ನಾವು ಮಾಡಿ, ಒಂದು ಸಾಫ್ಟ್ ವೇರ್ ಅನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದು, ಅದಕ್ಕೆ ಇನ್ನು 10-15 ದಿವಸಗಳಲ್ಲಿ ಮಂಜೂರಾತಿ ಸಿಗಬಹುದೆಂದು ನಿರೀಕ್ಷಿಸುತ್ತಿದ್ದೇವೆ. ಮಂಜೂರಾತಿ ದೊರೆತ ನಂತರ ಇಡೀ ರಾಜ್ಯಾದ್ಯಂತವಿರುವ ಎಲ್ಲಾ ದಾಖಲಾತಿಗಳನ್ನು ಗಣಕೀಕರಣಗೊಳಿಸುವ ಕಾರ್ಯಕ್ರಮವನ್ನು ನಾವು ಹಮ್ಮಿಕೊಳ್ಳುತ್ತೇವೆ.

ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) : ನಮ್ಮ ಬಿಜಾಪುರದ ಮಟ್ಟಿಗೆ ಹೇಳುವುದಾದರೆ ಈ ದಾಖಲೆಗಳೆಲ್ಲವೂ ಬಹಳಷ್ಟು ಕ್ಷೀಣಗೊಂಡಿವೆ. ಇದರಿಂದಾಗಿ ಅನೇಕ ಸಲ

ವ್ಯಾಜ್ಯಗಳಿಗೂ ಕಾರಣವಾಗುತ್ತಿರುವುದರಿಂದ ಸರ್ಕಾರ ಈ ಕಡೆ ವಿಶೇಷ ಗಮನ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ : ಆಗಬಹುದು.

ಆಶ್ರಯ ಮನೆಗಳು

405 -ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಶ್ರಯ ಮನೆಗಳ ರಚನೆಗೆ ಈಗ ಒದಗಿಸಿರುವ ರೂ.20,000.00 ಸಾಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಬಂದಿರುವುದಿಲ್ಲ.

ಆ) ಆಶ್ರಯ ಮನೆಗಳ ವೆಚ್ಚವನ್ನು ಹೆಚ್ಚಿಸುವ ಉದ್ದೇಶ ಸದ್ಯಕ್ಕೆ ಇರುವುದಿಲ್ಲ. ಆದರೆ ಫಲಾನುಭವಿಗಳೇ ಮನೆಗಳನ್ನು ಕಟ್ಟುವುದರಿಂದ ಅವರುಗಳಿಗೆ ಅನುಕೂಲತೆಗಳು ಹೆಚ್ಚಾಗಿ ಬೇಕಾದರೆ ಸರ್ಕಾರ ನೀಡುವ ಹಣದ ಜೊತೆಗೆ ಸ್ವಂತ ವಂತಿಕೆಯಿಂದ ಕಟ್ಟಿಕೊಳ್ಳಲು ಅವಕಾಶವಿರುತ್ತದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ಆಶ್ರಯ ಮನೆಗಳ ರಚನೆಗೆ ಒದಗಿಸುತ್ತಿರುವ 20,000.00 ರೂಪಾಯಿಗಳು ಸಾಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನಿಸಿರುವುದಕ್ಕೆ ಉತ್ತರವಾಗಿ ಅವರು ಬಂದಿರುವುದಿಲ್ಲವೆಂದಿದ್ದಾರೆ. ಇವೊತ್ತಿನ ಪರಿಸ್ಥಿತಿಯಲ್ಲಿ ಒಂದು ಪಕ್ಕಾ ಮನೆ ಕಟ್ಟಬೇಕಾದರೆ ನನ್ನ ಲೆಕ್ಕದ ಪ್ರಕಾರ ಸುಮಾರು 40,000 ದಿಂದ 50,000 ರೂಪಾಯಿಗಳು ಬೇಕಾಗುತ್ತದೆ. ವಾಸಕ್ಕೆ ಯೋಗ್ಯವಿರುವಂಥ ಮನೆ ಕಟ್ಟಬೇಕಾದರೆ ಇಷ್ಟು ಹಣ ಬೇಕಾಗುತ್ತದೆ. ಇದರಲ್ಲಿ ಶೌಚಾಲಯವೂ ಒಳಗೊಂಡಿರುತ್ತದೆ. ಆದರೆ, ಕಡಿಮೆ ಹಣದಲ್ಲಿ ಮನೆ ಕಟ್ಟುವ ಸಂದರ್ಭದಲ್ಲಿ ಬೇಕಾಗುವ ಮರಮುಟ್ಟುಗಳೇನಿರುತ್ತವೆ, ಕಡಿಮೆ ಕ್ರಯದ್ದು ಉಪಯೋಗಿಸಬೇಕಾಗುತ್ತದೆ. ಕಡಿಮೆ ಕ್ರಯದ ಸಾಮಗ್ರಿಗಳನ್ನು ಉಪಯೋಗಿಸಿದರೆ ಎರಡು ವರ್ಷಗಳಾಗುವಷ್ಟರಲ್ಲಿ ಪುನಃ ದುರಸ್ತಿಗೆ ಬರುತ್ತದೆ. ಇದರಿಂದಾಗಿ ಮನೆ ಕಟ್ಟಿರುವವರಿಗೆ ದೊಡ್ಡ ಹೊರೆಯಾಗುತ್ತದೆ. ಫಲಾನುಭವಿಗಳು ಒಂದು ಮನೆ ಕಟ್ಟಿಕೊಳ್ಳಬೇಕಾದರೆ 45,000 ರೂಪಾಯಿಗಳು ಬೇಕಾಗಿರುವುದರಿಂದ, ಸರ್ಕಾರ ಕೊಡುವ 20,000 ರೂಪಾಯಿಗಳು ಸಾಕಾಗುವುದಿಲ್ಲ. ಇಷ್ಟು ಹಣ ಬಳಸಿಕೊಂಡ ನಂತರವೂ ಬಡವರಿಗೆ ಇನ್ನು 20,000 ರಿಂದ 25,000 ರೂಪಾಯಿಗಳು ಖರ್ಚಾಗುತ್ತದೆ. ಅದಕ್ಕೋಸ್ಕರ, ಫಲಾನುಭವಿಗಳಿಗೆ ಆಶ್ರಯ ಮನೆಗಳನ್ನು ಕಟ್ಟಿಕೊಳ್ಳಲು 30,000 ದಿಂದ 35,000 ರೂಪಾಯಿಗಳಷ್ಟು ಹಣ ನಿಗದಿ